**<u>ಒ.ಎಸ್.ನಂಬ್ರ: 235/2016   ಪಿ.ಡಬ್ಲ್ಯೂ :  1</u>**

ದಿನಾಂಕ: 04-10-2023 ರಂದು ಸಾಕ್ಷಿಯನ್ನು ಪುನಃ ಕರೆಸಿ  ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

**<u>ಮುಂದುವರಿದ  ಪಾಟಿ ಸವಾಲು:   ಶ್ರೀ  ಎಂ.ಜೆ.ಎಸ್.   ವಕೀಲರಿಂದ</u>**

ಈ ದಾವೆಯನ್ನು ನಮ್ಮ ಜಾಗವನ್ನು ಪ್ರತಿವಾದಿಗಳು ಅತಿಕ್ರಮಣ ಮಾಡಿರುತ್ತಾರೆಂದು ಹೂಡಿರುತ್ತೇನೆ. ನಮಗೆ ಸೇರಿದ 46 ಸೆಂಟ್ಸು ಜಾಗವನ್ನು ಪ್ರತಿವಾದಿಗಳು ಅತಿಕ್ರಮಣ ಮಾಡಿರುತ್ತಾರೆ. ಪ್ರತಿವಾದಿಗಳು ಈ ದಾವೆಯನ್ನು ಹೂಡುವ ಸುಮಾರು 10 ವರ್ಷಗಳ ಮೊದಲು ನಮ್ಮ ಜಾಗವನ್ನು ಅತಿಕ್ರಮಣ ಮಾಡಿರುತ್ತಾರೆ.  ಪ್ರತಿವಾದಿಗಳು ಆ ರೀತಿಯಾಗಿ ಅತಿಕ್ರಮಣ ಮಾಡಿರುವ ಜಾಗದ ಸ್ವಾಧೀನತೆಯನ್ನು ಈ ದಾವೆಯಲ್ಲಿ ಕೇಳುತಿದ್ದೇನೆ . ಪ್ರತಿವಾದಿಯರ ಸ್ವಾಧೀನದಲ್ಲಿರುವ ಜಾಗ ಸುತ್ತ ಹಳೆ ಧರೆಬೇಲಿ ಇದೆ ಎಂದರೆ ಸರಿ . ಪ್ರತಿವಾದಿಯರ ಧರೆಬೇಲಿಯ ಒಳಗಡೆ ನಮ್ಮ 10 ಸೆಂಟ್ಸು ಜಾಗ ಅವರ ಅತಿಕ್ರಮಣದಲ್ಲಿ ಇರಬಹುದು. ಪ್ರತಿವಾದಿಯರ ಸ್ವಾಧೀನದಲ್ಲಿರುವ ಜಾಗದಲ್ಲಿ ಫಲ ಬರುವ

ತೆಂಗು ಮತ್ತು ಅಡಿಕೆ ಮರಗಳು ಇವೆ ಎಂದರೆ ಸರಿ. ಸ.ನಂ.110/3 ರಲ್ಲಿ ವಾದಿಯರ ಮತ್ತು ಪ್ರತಿವಾದಿಯರ ಸ್ವಾಧೀನದಲ್ಲಿರುವ ಜಮೀನಿನ ಮಧ್ಯದಲ್ಲಿರುವ ಧರೆಬೇಲಿಯಲ್ಲಿ ಮುಳ್ಳಿನ ಗಿಡಗಳು ಇದೆ ಎಂದರೆ ಸರಿ .

ನನ್ನ ಮತ್ತು ಪ್ರತಿವಾದಿಯರ ಜಮೀನಿನ ಮಧ್ಯದಲ್ಲಿರುವ ಧರೆಬೇಲಿಯ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ರಚಿಸುವಾಗ ನನ್ನ ವಕೀಲರಿಗೆ ತಿಳಿಸಿದ್ದೇನೆ. ನಮ್ಮ ತಂದೆಯವರು ಹೂಡಿದ ದಾವೆಯಲ್ಲಿಯೂ ಸದರಿ ವಿಷಯವನ್ನು ತಿಳಿಸಲಾಗಿದೆ. ಪ್ರತಿವಾದಿಯರ ಧರೆಬೇಲಿ ಒಳಗಡೆ ಇದ್ದ ಸ.ನಂ.110/3 ರ ಸ್ಥಳವನ್ನು ಪ್ರತಿವಾದಿಯರು ಮತ್ತು ಅವರ ಕುಟುಂಬಸ್ಥರು ಯಾವುದೇ ಅಡ್ಡಿಆತಂಕಗಳಿಲ್ಲದೆ ಶಾಂತರೀತಿಯಲ್ಲಿ ಅನುಭವಿಸಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಧರೆಬೇಲಿ ಒಳಗಡೆ ಇದ್ದ ಜಾಗವನ್ನು ಶಾಂತರೀತಿಯಲ್ಲಿ ಅನುಭವಿಸಿಕೊಂಡು ನಾವು ಯಾವುದೇ ತಕರಾರನ್ನು ಮಾಡಿರುವುದಿಲ್ಲ. ಪ್ರತಿವಾದಿಗಳ ಸ್ವಾಧೀನದಲ್ಲಿರುವ ಎ ಶೆಡ್ಯೂಲ್ ಆಸ್ತಿಯ ಸ್ವಾಧೀನವನ್ನು ಪಡೆಯಲು ನಾವು ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ದಾಖಲಿಸಿರುತ್ತೇವೆ. ಪ್ರತಿವಾದಿ 1 ರಿಂದ 3 ನೇಯವರು ಈ ದಾವೆಯಲ್ಲಿ ಸಲ್ಲಿಸಿದ ಆಕ್ಷೇಪಣೆಯನ್ನು ತಿಳಿದುಕೊಂಡಿದ್ದೇನೆ.

ನಿಪಿ-4 ವಿಭಾಗ ಪತ್ರದ ಪ್ರಕಾರ 1 ರಿಂದ 3 ನೇ ಪ್ರತಿವಾದಿಗಳಿಗೆ ನೀಡಿದ ಆಸ್ತಿಯನ್ನು ಮಾದಯ್ಯ ಶೆಟ್ಟಿ ಒಳಾಲು ಎಂದು ಕರೆದಿದ್ದಾರೆ ಎಂದರೆ ಸರಿ . ಪ್ರತಿವಾದಿಗಳಿಗೆ ನಿಪಿ-4 ರ ಪ್ರಕಾರ ನೀಡಿದ ಜಮೀನು ಖಾಲಿ ಜಾಗವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ-4 ರ ಪ್ರಕಾರ ಪ್ರತಿವಾದಿ 1 ರಿಂದ 3 ರವರಿಗೆ ಬಂದ ಸ.ನಂ. 110/3 ರಲ್ಲಿ ಧರೆಬೇಲಿ ನಿರ್ಮಿಸಿ ಅಡಿಕೆ ಮತ್ತು ತೆಂಗಿನ ತೋಟ ಇತ್ತು ಎಂದರೆ ಅವರ ಜಾಗದಲ್ಲಿ ತೆಂಗಿನ ತೋಟ ಮಾತ್ರ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ವಿಭಾಗಪತ್ರವಾದ ನಂತರ ಪ್ರತಿವಾದಿ 1 ರಿಂದ 3 ರವರಿಗೆ ಸೇರಿದ ಜಾಗದ ಸುತ್ತ ಧರೆಬೇಲಿ ಈಗಲೂ ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರ ಜಮೀನಿನ ಸುತ್ತ ಧರೆಬೇಲಿ ಇದೆ ಎಂದರೆ ಸಾಕ್ಷಿಯು ರಗ ಧರೆಬೇಲಿ ಇಲ್ಲ ಎಂದು ನುಡಿಯುತ್ತಾರೆ.

ವಾದಿ ಶಂಕರ್ ಹೆಗ್ಡೆಯವರಿಗೆ ನಿಪಿ-4 ರ ಪ್ರಕಾರ ನೀಡಿದ ಆಸ್ತಿ 1 ರಿಂದ 3 ನೇ ಪ್ರತಿವಾದಿಯವರ ಆಸ್ತಿಯ ಉತ್ತರ ಮತ್ತು ಪಶ್ಚಿಮ ದಿಕ್ಕಿನಲ್ಲಿದೆ. ವಾದಿ ಶಂಕರ್ ಹೆಗ್ಡೆಯವರಿಗೆ ನಿಪಿ-4 ರ ಪ್ರಕಾರ ನೀಡಿದ ಆಸ್ತಿಯ ಸ.ನಂ.110/3 ರ ಪಶ್ಚಿಮಕ್ಕೆ ಶಿವರಾಮ ಹೆಗ್ಡೆಯವರ ಆಸ್ತಿ ಇದೆ ಎಂದರೆ ಸರಿ . ಶಿವರಾಮ ಹೆಗ್ಡೆ ಎಂದರೆ ವಾದಿಯ ಖಾಸಾ ಅಣ್ಣ. ವಾದಿ ಮತ್ತು ಶಿವರಾಮ ಹೆಗ್ಡೆಯವರಿಗೆ ನಿಪಿ-4 ರ ಪ್ರಕಾರ ನೀಡಿದ ಆಸ್ತಿ ಮನೆ ಅಡಿ ಸ್ಥಳ. ಶಿವರಾಮ ಹೆಗ್ಡೆಮತ್ತು ವಾದಿಗೆ ನೀಡಿದ ಆಸ್ತಿಯ ಸುತ್ತ ಮಣ್ಣಿನ ಪಾಗಾರ (ಕಂಪೌಂಡ್) ಇತ್ತು ಎಂದರೆ ಸಾಕ್ಷಿಯು ಮೊದಲು ಇದ್ದ ಬಗ್ಗೆ ನನಗೆ ಗೊತ್ತಿಲ್ಲ ಈಗ ಇಲ್ಲ. ಪ್ರತಿವಾದಿ 1 ರಿಂದ 3 ರವರಿಗೆ ಸೇರಿದ ಜಮೀನಿನಲ್ಲಿ ತೆಂಗು , ಅಡಿಕೆ ಮತ್ತು ಸಾಗುವಾನಿ ಮರಗಳು ಇದೆ ಎಂದರೆ ಸಾಕ್ಷಿಯು ತೆಂಗಿನ ಮರಗಳು ಮಾತ್ರ ಇವೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರಿಂದ 3 ನೇಯವರು ನೆಟ್ಟು ಬೆಳೆಸಿದ ಮರಗಳನ್ನು ಸ್ವಾಧೀನ ಪಡೆಯಲು ಪ್ರತಿವಾದಿ 1 ರಿಂದ 3 ರವರ ಮೇಲೆ ಸುಳ್ಳು ದಾವೆ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ದಿ:07-07-2016 ರಂದು ದಾವಾ ಸ್ಥಳದಲ್ಲಿ ಗಲಾಟೆ ನಡೆದಿತ್ತು . ಏನು ಗಲಾಟೆ ನಡೆದಿದೆ ಎಂದು ನನಗೆ ತಿಳಿದಿಲ್ಲ, ನಾನು ಸ್ಥಳದಲ್ಲಿ ಇರಲಿಲ್ಲ. ನಿಪಿ-4 ವಿಭಾಗ ಪತ್ರದ ಪ್ರಕಾರ ಸ.ನಂ.110/3 ರ ಭಾಗ 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ಬಂದ ಸ್ಥಳ ಈಗಲೂ ಅವರ ಸ್ವಾಧೀನದಲ್ಲಿ ಇದೆ. ಅವರ ಸ್ವಾಧೀನವುಳ್ಳ ಸ್ಥಳವನ್ನು ಅಧಿಕಾರ ತಪ್ಪಿಸಲು ನನಗೆ ಅಧಿಕಾರ ಇಲ್ಲ ಎಂದರೆ ಸರಿ . ಅವರ ಸ್ವಾಧೀನವುಳ್ಳ ಜಮೀನನ್ನು ನಮ್ಮ ಸ್ವಾಧೀನಪಡಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರವರ ಸ್ವಾಧೀನದಲ್ಲಿ ನಮಗೆ ಸೇರಿದ ಸ.ನಂ 110/3 ರ ಭಾಗವಿದ್ದು ಅದರ ಸ್ವಾಧೀನತೆಗಾಗಿ ಈ ದಾವೆಯನ್ನು ಹೂಡಲಾಗಿದೆ. ನಿಜ ವಿಚಾರ ಮರೆಮಾಚಿ ಸುಳ್ಳು ದಾವೆ

ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಯಾವುದೇ ಪರಿಹಾರ ಹೊಂದಲು ನಾನು ಹೊಂದಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ದಾವೆಯಲ್ಲಿ ಹೇಳಿದ ಅಷ್ಟು ವಿಸ್ತೀರ್ಣದ ಆಸ್ತಿ ಪ್ರತಿವಾದಿ 1 ರಿಂದ 3 ರವರ ಸ್ವಾಧೀನದಲ್ಲಿ ಇಲ್ಲದಿದ್ದರೂ ಕೂಡಾ ಸುಳ್ಳು ದಾವೆ ದಾಖಲಿಸಿದ್ದೀರಾ ಎಂದರೆ ಸರಿಯಲ್ಲ. ದಿಃ 07-07-2016 ರಂದು ಯಾವುದೇ ಗಲಾಟೆ ನಡೆದಿಲ್ಲ ದಾವೆ ಹೂಡಲು ಯಾವುದೇ ಕಾರಣ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**